ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಹೌದು.

ಆ) ಟೌಸ್ಕ್ ಫೋರ್ಸ್ ಸಮಿತಿಯ ಅನುಮೋದನೆ ಮೇರೆಗೆ ಬಾಗೇಪಲ್ಲಿ ತಾಲ್ಲೂಕಿಗೆ ಕುಡಿಯುವ ನೀರು, ಉದ್ಯೋಗ ಸೃಜನೆ ಕಾಮಗಾರಿಗಳ ಹಾಗೂ ಗಡಿ ಪ್ರದೇಶ ಅಭಿವೃದ್ಧಿ ಯೋಜನೆಯಡಿ ಕಾಮಗಾರಿಗಳಿಗೆ ಈ ಕಛೇರಿಯಿಂದ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಅಂತಹ ಪ್ರಕರಣಗಳು ಯಾವುದೂ ಗಮನಕ್ಕೆ ಬಂದಿರುವುದಿಲ್ಲ.

ಈ) ಸಮಿತಿಯ ತೀರ್ಮಾನದಂತೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುವುದರಿಂದ ಸಮಿತಿಯ ಆಸ್ತಿತ್ವ ಅಗತ್ಯವಿರುತ್ತದೆ.

ಚಿಂತಾಮಣಿ ಕ್ಷೇತ್ರದಲ್ಲಿ ವಸತಿ ಆಶ್ರಯ ಯೋಜನೆ

2989 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ಕ್ಷೇತ್ರದ ಆಶ್ರಯ ಯೋಜನೆಯಡಿಯಲ್ಲಿ ನಡೆದ ಅಕ್ರಮಗಳು ಸರ್ಕಾರ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಅಥಣಿಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಹಾಗೂ ಕಟ್ಟಡಗಳ ನಿರ್ಮಾಣ

2990 - ಶ್ರೀ ಡೊಂಗರಗಾಂವ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನಲ್ಲಿ ಅಂಗನವಾಡಿ ಕೇಂದ್ರಗಳ ಹಾಗೂ ಕಟ್ಟಡಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ, ಅದನ್ನು ಸರಿದೂಗಿಸಲು ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು):

ಅ) ಸರ್ಕಾರದ ಗಮನಕ್ಕೆ ಬಂದಿದೆ. ಜಿಲ್ಲಾ ಪಂಚಾಯತ್‌ನ ವಿವಿಧ ಯೋಜನೆಗಳಡಿ ಸ್ವಂತ ಕಟ್ಟಡಗಳನ್ನು ಹಂತಹಂತವಾಗಿ ನಿರ್ಮಿಸಲಾಗುತ್ತಿದೆ. ಅಥಣಿ ತಾಲ್ಲೂಕಿನಲ್ಲಿ 1999-2000ನೇ ಸಾಲಿಗೆ

8 ಕಟ್ಟಡಗಳಿಗಾಗಿ ರೂ.4.00 ಲಕ್ಷ ಕಟ್ಟಡಗಳಿಗೆ ಮಂಜೂರಾಗಿದ್ದು ಈ ಕಟ್ಟಡಗಳ ನಿರ್ಮಾಣದ ವಿವಿಧ ಹಂತದಲ್ಲಿರುತ್ತವೆ. 2000-2001ನೇ ಸಾಲಿಗೆ 2 ಕಟ್ಟಡಗಳಿಗೆ ರೂ. 2.00ಲಕ್ಷ ಮಂಜೂರಾಗಿರುತ್ತದೆ.

ಅಥಣಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಕ್ಕೆ ಮೂಲಭೂತ ಸೌಕರ್ಯ ಹಾಗೂ ಬಸ್ ಸೌಕರ್ಯ

2991 - ಶ್ರೀ ಡೊಂಗರಗಾಂವ್ ಶಹಜಹಾನ್ ಇಸ್ಮಾಯಿಲ್ (ಅಥಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಥಣಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಕ್ಕೆ ಬಸ್ಸುಗಳ ಕೊರತೆ ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಅದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಬಸ್ಸುಗಳ ಕೊರತೆ ಇಲ್ಲ. ಆದರೆ ಸ್ವಲ್ಪಮಟ್ಟಿಗೆ ಚಾಲಕರ ಕೊರತೆ ಇದೆ.

ಆ) ದಿನಾಂಕ 31-08-2000 ರಂದು ಇದ್ದಂತೆ ಅಥಣಿ ಘಟಕವು ಒಟ್ಟು 100 ವಾಹನಗಳನ್ನು ಹೊಂದಿದ್ದು, ಸದರಿ ವಾಹನಗಳು ಘಟಕವು ಕಾರ್ಯಾಚರಣೆಗೊಳಿಸುತ್ತಿರುವ 92 ಅನುಸೂಚಿಗಳಿಗೆ ಸಾಕಾಗುವುದಿಲ್ಲದೇ, ಶೇಕಡ 8.7 ರಷ್ಟು ವಾಹನಗಳು ಘಟಕದಲ್ಲಿ ಹೆಚ್ಚುವರಿಯಾಗಿ ಲಭ್ಯವಿರುತ್ತವೆ. ಆದುದರಿಂದ, ಅಥಣಿ ಘಟಕದಲ್ಲಿ ವಾಹನಗಳ ಕೊರತೆಯು ಇರುವುದಿಲ್ಲ. ಚಾಲಕ ನಿರ್ವಾಹಕರ ಕೊರತೆಯಿಂದ ಮಾರ್ಗ ಕಾರ್ಯಾಚರಣೆಯನ್ನು ಹೆಚ್ಚಿಸಿರುವುದಿಲ್ಲ.

ಅಥಣಿ ಘಟಕದಲ್ಲಿ 92 ಅನುಸೂಚಿ ಓಡಿಸಲಾಗಿದ್ದು ಚಾಲಕ ನಿರ್ವಾಹಕ ಸಿಬ್ಬಂದಿ ವಿವರ ಕೆಳಗಿನಂತಿದೆ.

ಹುದ್ದೆ	ಮಂಜೂರಾತಿ	ಕಾರ್ಯನಿರತ	ಹೆಚ್ಚುವರಿ
ನಿರ್ವಾಹಕ	202	206	4
ಚಾಲಕ	203	212	9

ಸದರಿ ಘಟಕಕ್ಕೆ ಶೇಕಡ 10 ಬದಲಿ ನೀಡಬೇಕಾಗುತ್ತದೆ. ಅದರಂತೆ ಕೆಳಗಿನಂತೆ ಹೆಚ್ಚುವರಿ ಸಿಬ್ಬಂದಿ ನೀಡಬೇಕಾಗುತ್ತದೆ.

ನಿರ್ವಾಹಕರು 14

ಚಾಲಕರು 14

ಇದನ್ನು ಪರಿಗಣಿಸಿದಲ್ಲಿ ಸದರಿ ಘಟಕದಲ್ಲಿ 10 ನಿರ್ವಾಹಕ ಮತ್ತು 5 ಚಾಲಕರನ್ನು ನೀಡಬೇಕಾಗುತ್ತದೆ.